ಇ) ಈಗ ತಾತ್ಕಾಲಿಕವಾಗಿ ಬರುವ ಬಸ್ಸು ನಿಲುಗಡೆ ಸ್ಥಳದಲ್ಲಿ ಪ್ರಯಾಣಿಕರಿಗೆ ಶೌಚಾಲಯ, ವಿದ್ಯುತ್‌ದೀಪ, ಕುಡಿಯುವ ನೀರು, ನೆರಳು, ಅಥವಾ ಕುಳಿತುಕೊಳ್ಳಲು ಸ್ಥಳ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಹಾಗಿದ್ದಲ್ಲಿ ಈ ತೊಂದರೆಯನ್ನು ನಿವಾರಿಸಲು ಸರ್ಕಾರದವರು ಯಾವ ಕ್ರಮಗಳನ್ನು ಕೈಗೊಳ್ಳುವರು?

ಶ್ರೀ ಮಿರಾಜುದ್ದೀನ್ ಎನ್.ಪಾಟೀಲ್ (ಪೌರಾಡಳಿತ ಸಚಿವರು):-

ಅ) ಮಂಗಳೂರಿನ ಹಂಪನಕಟ್ಟೆಯಲ್ಲಿರುವ ಗ್ರಾಮಾಂತರ ಬಸ್ಸು ನಿಲ್ದಾಣದಲ್ಲಿ ಸಾರ್ವಜನಿಕರಿಗೆ ನಲ್ಲಿ ನೀರಿನ ವ್ಯವಸ್ಥೆ ವಿದ್ಯುತ್ ದೀಪ ಹಾಗೂ ತಂಗುದಾಣಗಳನ್ನು ಈಗಾಗಲೇ ನಿರ್ಮಿಸಲಾಗಿದೆ.

ಆ) ಈ ವಿಷಯವು ಪರಿಶೀಲನೆಯಲ್ಲಿದೆ.

ಇ) ಈಗ ತಾತ್ಕಾಲಿಕವಾಗಿ ಇರುವ ಬಸ್ಸು ನಿಲುಗಡೆ ಸ್ಥಳದಲ್ಲಿ ನೀರಿನ ಸೌಕರ್ಯ ಹಾಗೂ ವಿದ್ಯುತ್ ದೀಪಗಳ ವ್ಯವಸ್ಥೆ ಇದೆ. ತಂಗುದಾಣವು ನಿರ್ಮಿಸಲಾಗಿದೆ. ಸುಲಭ ಶೌಚಾಲಯದ ವ್ಯವಸ್ಥೆ ಈ ಬಸ್ಸು ನಿಲ್ದಾಣದ ಪಕ್ಕದಲ್ಲಿಯೇ ಇದೆ.

ಈ) ಪ್ರಶ್ನೆ ಉದ್ಭವಿಸುವುದಿಲ್ಲ.

ವಿಷಯ:- ಹುಬ್ಬಳ್ಳಿ ನಗರದ ಅನಂದ ನಗರ ಮತ್ತು ಪಾಂಡುರಂಗ ಕಾಲೋನಿಯಲ್ಲಿ ಹಕ್ಕು ಪತ್ರಗಳ ವಿತರಣೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 182 (498)

ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮಾಂತರ):- ಮಾನ್ಯ ಪೌರಾಡಳಿತ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಹುಬ್ಬಳ್ಳಿ ನಗರದ ಅನಂದ ನಗರ ಮತ್ತು ಪಾಂಡುರಂಗ ಕಾಲೋನಿಯಲ್ಲಿರುವ ನಿವಾಸಿಗಳಿಗೆ ನಿವೇಶನ ಹಕ್ಕು ಪತ್ರಗಳನ್ನು ಈವರೆಗೆ ವಿತರಿಸದಿರುವುದರಿಂದ ಸದರಿ ನಾಗರೀಕರು ತೊಂದರೆ ಅನುಭವಿಸುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ?

ಆ) ಹಾಗಿದ್ದಲ್ಲಿ ಈ ಹಕ್ಕುಪತ್ರ ವಿತರಿಸಲು ಸರ್ಕಾರವು ಕೈಗೊಂಡ ಕ್ರಮಗಳೇನು? ಹಾಗೂ ಎಷ್ಟು ಅವಧಿಯಲ್ಲಿ ಹಕ್ಕು ಪತ್ರಗಳನ್ನು ವಿತರಿಸಲಾಗುವುದು?

ಶ್ರೀ ಮಿರಾಜುದ್ದೀನ್ ಎನ್.ಪಟೀಲ್ (ಪೌರಾಡಳಿತ ಸಚಿವರು):-

ಅ) ಬಂದಿದೆ.

ಆ) 1960 ನಿವೇಶನಗಳಿಗೆ ಹಕ್ಕು.ಪತ್ರ ವಿತರಿಸಲಾಗಿದ್ದು ಇನ್ನುಳಿದ ನಿವೇಶನಗಳಿಗೆ ಹಕ್ಕು ಪತ್ರಗಳನ್ನು ವಿತರಿಸುವ ಬಗ್ಗೆ ಪರಿಶೀಲನೆಯಲ್ಲಿದೆ.